**ಸಾಕ್ಷಿಯನ್ನು ದಿಃ 05.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ 3 ನೇ ಎದುರುದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಸಂಸ್ಥೆಯವರು ನೀಡಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು, ನಿಆರ್. 1 ಎಂದು,
ವಿಮಾ ಪಾಲಿಸಿಯ ಯಥಾ ನಕಲನ್ನು ಹಾಜರುಪಡಿಸಿದ್ದು, ನಿಆರ್. 2 ಎಂದು,
2 ನೇ ಎದುರುದಾರರಿಗೆ ಬರೆದಿರುವ ಪತ್ರ ಹಾಜರು ಪಡಿಸಿದ್ದು ನಿಆರ್.3 ಎಂದು,
ಹಿಂತಿರುಗಿ ಬಂದ ಅಂಚೆ ಲಕೋಟೆಯನ್ನು ಹಾಜರು ಪಡಿಸಿದ್ದು ನಿಆರ್. 4 ಎಂದು,
ಅದರಲ್ಲಿನ ಪತ್ರ ಹಾಜರು ಪಡಿಸಿದ್ದು ಅದನ್ನು ನಿಆರ್. 4(ಎ) ಎಂದು,
ಅಂತಿಮ ವರದಿಯ ಯಥಾ ನಕಲನ್ನು ಹಾಜರು ಪಡಿಸಿದ್ದು ನಿಆರ್. 5 ಎಂದು ಗುರುತಿಸಲಾಯಿತು. ಆದುದರಿಂದ ಅರ್ಜಿಯನ್ನು ವಜಾಗೊಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಅರ್ಜಿದಾರರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.